





ದಿನಾಂಕ:24-10-23 ರಂದು ಕನ್ನಡದ ಕುಲಗುರುಗಳು, ಸೌಹಾರ್ದತೆಯ ಹರಿಕಾರರೆಂದು ಖ್ಯಾತರಾದ ಲಿಂಗೈಕ್ಯ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ 05ನೇ ಪುಣ್ಯಸ್ಮರಣೆ ಮರಣವೇ ಮಹಾನವಮಿ ಆಚರಣೆ ಹಾಗೂ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರದಾನ, ಗ್ರಂಥಗಳ ಬಿಡುಗಡೆ ಸಮಾರಂಭದಲ್ಲಿ ನಾನು ನಂಬಿರುವ ಕೆಲವೇ ಕೆಲವು ಸ್ವಾಮೀಜಿಗಳಲ್ಲಿ ತೋಂಟದ ಶ್ರೀಗಳು ಅಗ್ರಮಾನ್ಯರು. ಹೀಗಾಗಿ ಅವರ ಮಾತುಗಳು ನನಗೆ ವೇದವಾಕ್ಯ. ಅವರ ಆದರ್ಶಗಳನ್ನು ಇಂದಿಗೂ ನಾನು ಪಾಲಿಸಿಕೊಂಡು ಬರುತ್ತಿರುವೆ ಎಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ದಕ್ಷ ಪ್ರಮಾಣಿಕ ಅಧಿಕಾರಿಯೆಂದೇ ಖ್ಯಾತರಾದ ನಿವೃತ್ತ ಐ.ಎ.ಎಸ್. ಅಧಿಕಾರಿ ಡಾ.ಎಸ್.ಎಂ ಜಾಮದಾರ ಅವರಿಗೆ ಡಾ. ತೋಂಟದ ಸಿದ್ದಲಿಂಗ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡಿದರು ಹಾಗೂ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಸಚಿವರಾದ ಶ್ರೀ ಎಚ್.ಕೆ ಪಾಟೀಲ್ ರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.